ಸಾಕ್ಷಿಯನ್ನು ದಿಃ **17.09.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1 ಮತ್ತು 2ನೇ ಪ್ರತಿವಾದಿಗಳ ಪರ ಶ್ರೀ ಎಂ ಬಿ ವಕೀಲರಿಂದಃ-

ಸಾವಿತ್ರಮ್ಮ ನನಗೆ ಚಿಕ್ಕಮ್ಮನಾಗಬೇಕು. ಸಾವಿತ್ರಮ್ಮ ರವರು ದಿನಾಂಕ 28.09.2012 ರಂದು ವಾದಿಯರಾದ ನಮ್ಮ ಮತ್ತು ಇತರ ಕುಟುಂಬದ ಸದಸ್ಯರ ವಿರುದ್ಧ ಹಿಸ್ಸೆ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಸಾವಿತ್ರಮ್ಮ ರವರು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಬಾರದೆಂದು ತಾತ್ಕಾಲಿಕ ಪ್ರತಿಬಂದಕಾಜ್ಞೆ ಪಡೆದುಕೊಂಡಿದ್ದರು ಎಂದರೆ ಸರಿ. ಈ ದಾವೆಯಲ್ಲಿ ಮೇಲೆ ಹೇಳಿದ ಸಾವಿತ್ರಮ್ಮ ರವರ ಮಕ್ಕಳನ್ನು 4 ಮತ್ತು 5ನೇ ಪ್ರತಿವಾದಿಯರನ್ನಾಗಿ ಮಾಡಿದ್ದೇವೆ ಎಂದರೆ ಸರಿ. ಸದರಿ ದಾವೆ ಸಂಖ್ಯೆ 339/2012 ರಲ್ಲಿ ವಾದಿಯರಾದ ನಾವು ವಕೀಲರನ್ನು ನೇಮಕ ಮಾಡಿ ಪ್ರತಿವಾದ ಪತ್ರ ಸಲ್ಲಿಸಿದ್ದೇವೆ ಎಂದರೆ ಸರಿ. ಈ ದಾವೆಯ 3ನೇ ಪ್ರತಿವಾದಿಯ ಗಂಡ ವಿ.ಕೆ. ತಿಮ್ಮೇಗೌಡರವರು ಅಸಲು ದಾವೆ ಸಂಖ್ಯೆ 339/2012 ರಲ್ಲಿ ಪಕ್ಷಗಾರರಾಗಿದ್ದು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಸಾವಿತ್ರಮ್ಮ ಮತ್ತು ವಾದಿಯರಾದ ನಾವು ದಾವ ಸ್ವತ್ತುಗಳ ಜಂಟಿ ಸ್ವಾಧೀನದಲ್ಲಿ ಇಲ್ಲ ಎಂದು ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲ.

ದಿನಾಂಕ 02.12.2013 ರಂದು ನ್ಯಾಯಾಲಯವು ಸಾವಿತ್ರಮ್ಮರವರು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿ ಏಕಪಕ್ಷೀಯವಾಗಿ ನೀಡಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿತು ಎಂದರೆ ವಕೀಲರು ನಮಗೆ ಸರಿಯಾಗಿ ಮಾಹಿತಿಯನ್ನು ನೀಡಿರಲಿಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನಾವಾಗಲೀ ಸಾವಿತ್ರಮ್ಮರವರಾಗಲೀ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ನಮಗೆ ಸದರಿ ಆದೇಶದ ಬಗ್ಗೆ ಮಾಹಿತಿ ಇರಲಿಲ್ಲ. ಸಾಕ್ಷಿ ಮುಂದುವರೆದು ಹುಣಸೂರು ಸಿವಿಲ್ ನ್ಯಾಯಾಲಯದಲ್ಲಿ ಇನ್ನೂ ಕೂಡ ಸಂಕೀರ್ಣ ಅರ್ಜಿ ವಿಚಾರಣೆಗೆ ಬಾಕಿ ಇದೆ ಎಂದು ನುಡಿಯುತ್ತಾರೆ. ಸದರಿ ಮಿಸ್ ನಂಬರ್ 329/2012. ದಿನಾಂಕ 30.10.2018 ರಂದು ಅಸಲು ದಾವೆ ಸಂಖ್ಯೆ 339/2012 ಆ ದಾವೆಯ ವಾದಿಯ ಮತ್ತು ಅವರ ವಕೀಲರ ಗೈರು ಹಾಜರಿನಿಂದಾಗಿ ವಜಾಗೊಂಡಿತು ಎಂದರೆ ನಮಗೆ ವಕೀಲರು ಸರಿಯಾಗಿ ಮಾಹಿತಿ ನೀಡಿರಲಿಲ್ಲ. ಮಿಸ್ ಪಿಟಿಷನ್ ಅಲ್ಲಿ 3ನೇ ಪ್ರತಿವಾದಿಯ ಗಂಡ ವಿ ಕೆ ತಿಮ್ಮೇಗೌಡರವರು ಈ ದಾವೆಯ 1ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದು ಪಕ್ಷಗಾರರನ್ನಾಗಿ ಮಾಡಿಕೊಂಡು ಸಲ್ಲಿಸಿಲ್ಲ ಎಂದರೆ ಸಲ್ಲಿಸಿದ್ದೇನೆ. ಅಸಲು ದಾವೆ ಸಂಖ್ಯೆ 339/2012 ರಲ್ಲಿ ಸಾವಿತ್ರಮ್ಮ ರವರು ಕೇಳಿದ ಪರಿಹಾರವನ್ನೇ ಈ ದಾವೆಯಲ್ಲಿ ನಾವು ಕೇಳುತ್ತಿದ್ದೇವೆ ಎಂದರೆ ಸರಿ. ಈ ದಾವೆಯನ್ನು ಜಂಟಿ ಪಹಣಿಯ ಬಗ್ಗೆ ಹಾಗೂ ಕ್ರಯ ಪತ್ರಗಳನ್ನು ರದ್ದುಗೊಳಿಸುವಂತೆ ಸಲ್ಲಿಸಿದ್ದೇವೆ.

ದಿನಾಂಕ 14.06.2017 ರ ಕ್ರಯ ಪತ್ರ ಶೂನ್ಯ ಎಂದು ಕೇಳಿರುವ ಬಗ್ಗೆ ನ್ಯಾಯಾಲಯದ ಶುಲ್ಕ ಪಾವತಿಸಿದ್ದೀರಾ ಎಂದರೆ ವಕೀಲರನ್ನು ಕೇಳಿ ಪಾವತಿಸುತ್ತೇವೆ. 1 ನೇ ಪ್ರತಿವಾದಿ ರೂ 72,125/- ನ್ಯಾಯಾಲಯದ ಶುಲ್ಕ ಪಾವತಿಸಿ 3 ನೇ ಪ್ರತಿವಾದಿಯ ಗಂಡನ ವಿರುದ್ಧ ಡಿಕ್ರಿ ಪಡೆದುಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.